**ಓ ಎಸ್ ನಂಃ 158/2019**
**ಪಿ ಡಬ್ಲ್ಯು ಃ 1**

**ದಿಃ 07.03.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಆರ್ ಎಸ್ ವಕೀಲರಿಂದಃ-**

ದಾವಾ ಆಸ್ತಿಗಳಲ್ಲಿ ವಿಭಾಗ ಆಗಿರುವುದಿಲ್ಲ. ನನ್ನ ತಾತನಿಗೆ ಸೇರಿದ ಎಷ್ಟು ಆಸ್ತಿಗಳಿವೆ ಎಂದರೆ ಸಾಕ್ಷಿಯು ಯಾವುದೇ ಆಸ್ತಿಗಳಿಲ್ಲ ಎಂದು ನುಡಿಯುತ್ತಾರೆ. ದಿಃ 12.12.1961 ರ ಕ್ರಯ ಪತ್ರದ ಬಗ್ಗೆ ಏನಾದರೂ ಮಾಹಿತಿ ಇದೆಯಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ದಿಃ 12.12.1961 ರ ಕ್ರಯ ಪತ್ರದ ಬಗ್ಗೆ ತಾವು ತಮ್ಮ ವಾದ ಪತ್ರದಲ್ಲಿ ಏನಾದರು ಹೇಳಿ ಬರೆಸಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ದಿಃ 16.03.1962 ರ ಕ್ರಯ ಪತ್ರದ ಬಗ್ಗೆ ತಮಗೇನಾದರೂ ಮಾಹಿತಿ ಇದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ದಿಃ 12.12.1961 ಮತ್ತು ದಿಃ 16.03.1962 ರ ಕ್ರಯ ಪತ್ರಗಳಲ್ಲಿ ನಮೂದು ಮಾಡಿರುವ ಆಸ್ತಿಗಳು ಯಾವುವು ಎಂದರೆ ನನಗೆ ಗೊತ್ತಿಲ್ಲ. ನರಸಿಂಹಯ್ಯನವರ ಮಗ ಕೃಷ್ಣಮೂರ್ತಿ, ಸೀತಾರಾಮಯ್ಯನವರ ಮಗ ಪದ್ಮನಾಭ ರವರ ಬಗ್ಗೆ ತಮಗೆ ಗೊತ್ತ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರ್ ಜಿ ಶಾಮಣ್ಣರವರು ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ. 82, 84 ಮತ್ತು 85 ರ ಜಮೀನುಗಳ ಬಗ್ಗೆ ತಮಗೆ ಮಾಹಿತಿ ಇದೆಯಾ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ. 79 ರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸರ್ವೆ ನಂ. 79 ರಲ್ಲಿ ಎಷ್ಟು ವಿಸ್ತೀರ್ಣ ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಸರ್ವೆ ನಂ. ವಿಸ್ತೀರ್ಣ, ಚಕ್ಕುಬಂದಿ ತಮಗೆ ಹೇಳಲು ಬರುತ್ತದ ಎಂದರೆ ಸಾಕ್ಷಿ ನನಗೆ ಓದಲು ಬರೆಯಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಎಷ್ಟು ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಈ ದಾವೆ ಯನ್ನು ಸಲ್ಲಿಸಿದ್ದೀರಿ ಎಂದರೆ ಸಾಕ್ಷಿಯು ಎಲ್ಲಾ ವಿಚಾರಗಳು ನಮ್ಮ ವಕೀಲರಿಗೆ ತಿಳಿಸಿರುತ್ತೇನೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ನಾನು ಮೂಲ ದಾಖಲಾತಿಗಳನ್ನು ನೋಡಿರುವುದಿಲ್ಲ, ಸಾಕ್ಷಿ ಸ್ವತಃ ಮುಂದುವರಿದು ನನ್ನ ತಂದೆಯವರು ಖರೀದಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಮೂಲ ದಾಖಲಾತಿಗಳು ನಮ್ಮ ಬಳಿ ಇದೆ. ಸದರಿ ದಾಖಲಾತಿಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ತಾವು ನ್ಯಾಯಾಲಯಕ್ಕೆ ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಯಾವುದೇ ಮೂಲ ದಾಖಲಾತಿಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ತಾವು

ನ್ಯಾಯಾಲಯಕ್ಕೆ ಹಾಜರುಪಡಿಸಿರುವ ಮೂಲ ದಾಖಲಾತಿಗಳ ವಿವರದ ಬಗ್ಗೆ ತಮಗೆ ಗೊತ್ತಾ ಎಂದರೆ ಸಾಕ್ಷಿಯು ನನಗೆ ಓದು ಬರಹ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ತಾವು ಹಾಜರುಪಡಿಸಿರುವ ಲಿಸ್ಟ್ ನಲ್ಲಿ ಯಾರು ಯಾರು ಸ್ವಾಧೀನಾನುಭವದಲ್ಲಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಿಪಿ 9 ರ ನಕ್ಷೆಯ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನಿಪಿ 10 ರ ದಾಖಲಾತಿ ಬಗ್ಗೆ ಸಹ ನನಗೆ ಮಾಹಿತಿ ಇಲ್ಲ. ತಾವು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ನಿಪಿ 11 ರಿಂದ 36 ರ ದಾಖಲಾತಿಗಳ ಬಗ್ಗೆ ತಮಗೆ ಮಾಹಿತಿ ಇದೆಯಾ ಎಂದರೆ ನನಗೆ ಮಾಹಿತಿ ಇರುವುದಿಲ್ಲ. ತಾವು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ನಿಪಿ 1 ರಿಂದ 11 ರ ದಾಖಲಾತಿಗಳ ಬಗ್ಗೆ ತಮಗೆ ಮಾಹಿತಿ ಇದೆಯಾ ಎಂದರೆ ನನಗೆ ಮಾಹಿತಿ ಇರುವುದಿಲ್ಲ. ನಿಪಿ 1 ರಿಂದ 11 ರ ದಾಖಲಾತಿಗಳನ್ನು ಯಾರು ಸಕ್ಷಮ ಪ್ರಾಧಿಕಾರ ಪಡೆದಿದ್ದಾರೆ ಎಂದರೆ ಸಾಕ್ಷಿಯು ನನ್ನ ಮಕ್ಕಳು ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತಿನ ಕಂದಾಯ ದಾಖಲಾತಿಗಳು ಯಾರ ಹೆಸರಿನಲ್ಲಿವೆ ಎಂದರೆ ಸಾಕ್ಷಿಯು ನಮ್ಮ ತಂದೆಯ ಹೆಸರಿನಲ್ಲಿವೆ ಎಂದು ನುಡಿಯುತ್ತಾರೆ. ತಾವು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲಾತಿಗಳ ಬಗ್ಗೆ ಬೇರೆಯವರ ಕಡೆಯಿಂದ ಓದಿ ತಿಳಿದುಕೊಂಡಿದ್ದೀರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ತಮ್ಮ ತಂದೆಯವರ ಜೀವಿತಾವಧಿಯಲ್ಲಿ ದಾವಾ ಸ್ವತ್ತುಗಳನ್ನು ಬಿಡಿಸಿಕೊಡುವಂತೆ ಪ್ರತಿವಾದಿಗಳ ವಿರುದ್ದ ದಾವೆಯನ್ನು ಸಲ್ಲಿಸಿದ್ದಾರ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಕಂದಾಯ ಅಧಿಕಾರಿಗಳ ಮುಂದೆ ಪ್ರಕರಣ ದಾಖಲಾಗಿತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಮ್ಮ ತಂದೆಗೆ 4 ಜನ ಹೆಣ್ಣು ಮಕ್ಕಳು ಇಬ್ಬರು ಗಂಡು ಮಕ್ಕಳು ಇರುತ್ತಾರೆ. ನಮ್ಮ ತಂದೆಗೆ ಸೇರಿದ ಆಸ್ತಿಗಳನ್ನು ನಾವು ಸುಮಾರು 8 ವರ್ಷಗಳ ಹಿಂದೆ ವಿಭಾಗ ಮಾಡಿಕೊಂಡಿರುತ್ತೇವೆ. ಕಂದಾಯ ಮೇಲ್ಮನವಿ ಸಂಖ್ಯೆ 475/2017-18 ರ ಬಗ್ಗೆ ನನಗೆ ಗೊತ್ತಿಲ್ಲ. ತಾವು ಸ್ವಾಧೀನ ಬಿಡಿಸಿಕೊಡುವಂತೆ ಪ್ರತಿವಾದಿಗಳಿಗೆ ಕೇಳಿದ್ದೀರ ಎಂದರೆ ಸಾಕ್ಷಿಯು ಕೇಳಿದ್ದೇವೆ ಸ್ವಾಧೀನವನ್ನು ಬಿಟ್ಟುಕೊಡುವುದಿಲ್ಲ ಎಂದು ನುಡಿಯುತ್ತಾರೆ. ಸುಮಾರು 7 ವರ್ಷಗಳ ಹಿಂದೆ ಕೇಳಿರುತ್ತೇವೆ. ದಾವಾ ಆಸ್ತಿಯಲ್ಲಿ ದೇವಸ್ಥಾನ ಇದೆ ಎಂದರೆ ಸರಿ. ಸಾಕ್ಷಿಗೆ 6 ಛಾಯಾ ಚಿತ್ರಗಳನ್ನು ತೋರಿಸಲಾಗಿದ್ದು ಸಾಕ್ಷಿ ಅವುಗಳನ್ನು ನೋಡಿ ಒಪ್ಪಿದ್ದು ಸಾಕ್ಷಿಯ ಒಪ್ಪಿಗೆಯ ಮೇರೆಗೆ ಅವುಗಳನ್ನು **ನಿಡಿ 1 ರಿಂದ ನಿಡಿ 6** ಎಂದು

ಗುರುತಿಸಲಾಯಿತು. ನಿಡಿ 6 ರ ಛಾಯಾಚಿತ್ರದಲ್ಲಿ ಕಾಣಿಸುತ್ತಿರುವ ಮನೆಯಲ್ಲಿ ಕೆಂಪಮ್ಮ ನವರು (ಪ್ರತಿವಾದಿ) ಎಷ್ಟು ವರ್ಷಗಳಿಂದ ವಾಸವಾಗಿದ್ದಾರೆ ಎಂದರೆ ಸಾಕ್ಷಿ ಸುಮಾರು 30 ವರ್ಷಗಳಿಂದ ವಾಸವಾಗಿದ್ದಾರೆ. ನಿಪಿ 3 ರ ಛಾಯಾಚಿತ್ರದಲ್ಲಿ ಕಾಣಿಸುತ್ತಿರುವ ದೇವಸ್ಥಾನದ ನಿರ್ಮಾಣ ಸುಮಾರು 15 ವರ್ಷಗಳ ಹಿಂದೆ ಆಯಿತು. ಸದರಿ ದೇವಸ್ಥಾನದಲ್ಲಿ ಪೂಜೆಯನ್ನು ಕೆಂಪಮ್ಮನವರ ಮಗ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**